# ಪ್ರೇಮ ಪಕ್ಷಿಗಳ ವಿಚಾರ-ವಿಹಾರ

ಲಿಂಗನಗೌಡ ಪಾಟೀಲರ ಕುಟುಂಬವೇ ಆತ್ಮಾವಲೋಕನ ಮಾಡಿಕೊಳ್ಳುವ ಹಾಗೆ ಮಾಡಿದ್ದು ಪವಾಡವೇ! ಆದರೆ ಮುಂದೇನು? ಎಂಬ ಪ್ರಶ್ನೆ ಹಾಗೇ ಇತ್ತು. ನಾಗತಿಹಳ್ಳಿ ಸರ್ ಅವರೇ ಎಲ್ಲಾ ಅಡೆತಡೆಗಳನ್ನು ನಿವಾರಿಸಿ ನಮ್ಮ ಪ್ರೀತಿಗೆ ಸುಖಾಂತ್ಯ ನೀಡಲಿ ಎಂದು ನಿರೀಕ್ಷಿಸುವುದು ಸರಿಯಲ್ಲ ಎನ್ನುವುದು ಪ್ರೀತಂನಿಗೆ ಅರಿವಾಗಿತ್ತು. ಪ್ರೀತಿ ಪ್ರೇಮಕ್ಕೆ ಬಾಹ್ಯಪೋಷಣೆ ಒಂದು ಹಂತದವರೆಗೆ ಮಾತ್ರ. ನಿಜಪ್ರೇಮ ಸ್ವಯಂ ಅಗ್ನಿದಿವ್ಯವನ್ನು (ಸುಮಿಯ ಶಬ್ದ) ಹಾಯಲೇಬೇಕು. ನಾಗತಿಹಳ್ಳಿ ಸರ್ ಬಾಯ್ಬಿಟ್ಟು ಹೇಳದಿದ್ದರೂ ಅವರೊಡನೆಯ ಮಾತುಕತೆಯಲ್ಲಿ ಇದು ಪ್ರೀತಂನಿಗೆ ಅರಿವಾಗಿತ್ತು. ಪ್ರೀತಂ ಅದಕ್ಕೆ ಮಾನಸಿಕವಾಗಿ ಸಿದ್ಧನಾಗಿಯೂ ಇದ್ದ. ಹೇಗಾದರೂ ವಿರುಪಾಕ್ಷಿಯ ಮನಸ್ಸು ಗೆಲ್ಲಬೇಕು. ಆದರೆ ವಿರುಪಾಕ್ಷಿಯ ನಡೆ ನಿಗೂಢವಾಗಿಯೇ ಇತ್ತು.

ಲಿಂಗಣ್ಣನವರ ಮಾತಿನಿಂದ ಅಂದಾಜು ಮಾಡುವುದಾದರೆ ಆತ ಇದನ್ನೊಂದು ಪ್ರತಿಷ್ಠೆಯ ವಿಷಯವನ್ನಾಗಿ ತೆಗೆದುಕೊಳ್ಳುವ ಎಲ್ಲಾ ಸಾಧ್ಯತೆಗಳಿದ್ದವು. ಅವನು ತನ್ನ ಮತ್ತು ಸುಮಿಯ ಚಲನವಲನಗಳ ಮೇಲೆ ನಿಗಾ ಇಡಲು ಖಂಡಿತವಾಗಿಯೂ ಅವನದೇ ಜನರನ್ನು ನೇಮಿಸಿಕೊಂಡಿರುತ್ತಾನೆ. ಆ ಬಗ್ಗೆ ಅನುಮಾನವೇ ಬೇಡ. ಮತ್ತೆ ದೈಹಿಕ ಹಲ್ಲೆಗೂ ಪ್ರಯತ್ನಿಸಬಹುದು. ಆಶ್ಚರ್ಯವೆಂದರೆ ಆ ಬಗ್ಗೆ ತನ್ನಲ್ಲಿ ಭಯವೇನೋ ಆಗುತ್ತಿಲ್ಲ. ಅದು ನನ್ನ ಹುಂಬತನವಿರಬಹುದೇ? ಇರಲಿಕ್ಕಿಲ್ಲ. ಹುಂಬತನವೂ ಭಯವನ್ನು ಮೀರುವ ಪ್ರತಿಕ್ರಿಯಾತ್ಮಕ ಅಭಿವ್ಯಕ್ತಿಯೇ. ಈಗ ನನ್ನಲ್ಲಿರುವುದು ನಿರ್ಭಯದ ಭಾವ. ಬಹುಶಃ ಅದು ಪ್ರೇಮದ ಕೊಡುಗೆಯೇ ಇರಬಹುದು. ವಿರುಪಾಕ್ಷಿ ಕಾರವಾರದಿಂದ ಜಮಖಂಡಿಗೆ ವರ್ಗಾ ಮಾಡಿಸಿಕೊಂಡಿರುವುದು ಶೈಲತ್ತೆಗೂ ಗೊತ್ತಿರಲಿಲ್ಲ. ಲಿಂಗಣ್ಣ ಬಾಯ್ತಪ್ಪಿ ಆ ಮಾತು ಹೇಳಿದ್ದರು. ಅವನು ಈ ತುರ್ತು ವರ್ಗಾವಣೆಯನ್ನು ಮಾಡಿಸಿಕೊಂಡದ್ದು ಕಾರವಾರದಿಂದ ಸುಮಿಯನ್ನು ಶಾಶ್ವತವಾಗಿ ದೂರವಾಗಿಸುವ ತಂತ್ರವೇ. ಇಲ್ಲಿಂದ ಊರಿಗೆ ಮರಳುವ ದಾರಿಯಲ್ಲಿ ಆತನನ್ನು ಮೀಟ್ ಮಾಡಿ ಹೋದರೆ ಹೇಗೆ, ಎಂದು ಪ್ರೀತಂ ಯೋಚಿಸಿದ್ದ. ಶೈಲತ್ತೆ ಬಿಲಕುಲ್ 'ಬೇಡ' ಅಂದುಬಿಟ್ಟಳು.

'ಅವ್ನು ತಂಗೀನ ಜೀವಕ್ಕಿಂಥ ಹೆಚ್ಚು ಪ್ರೀತ್ಸೋ ಮನಸ್ಯಾ. ಇಬ್ಬರಿಗೂ ವಯಸ್ಸಿನ ಅಂತರ ಐತಿ. ಆದ್ರೂ ಅವ್ರ ನಡುವೆ ಸ್ನೇಹವೂ ಐತಿ. ಆಕಿ ಚುರುಕುತನಕ್ಕೆ ಭೇಷ್ ಅಂತಿರ್ತಾನ. ನಮ್ಮ ಸುಮಿನ ಐಎಎಸ್ ಮಾಡ್ಸಬೇಕು ಎಂದು ಅಭಿಮಾನದಿಂದ ಹೇಳ್ತಿದ್ದ. ಅವಳ ಮೇಲೆ ಅವನಿಗೆ ಅಪಾರ ಭರವಸೆ. ಅದಕ್ಕಾಗೇ ಅವ್ನು ಸುಮಿಗೆ ತುಂಬಾನೇ ಸ್ವಾತಂತ್ರ್ಯ ಕೊಟ್ಟಿದ್ದ. ತಾನು ನೀಡಿದ ಸ್ವಾತಂತ್ರ್ಯವೇ ಅವಳು ಪ್ರೇಮದವರೆಗೂ ಮುಂದುವರಿಯುವ ಹಾಗೆ ಆದದ್ದು ಅವನಿಗೆ ದೊಡ್ಡ ಶಾಕ್ ಆಗೈತಿ. ಅವನ ಇಗೋಗೆ ಹರ್ಟ್ ಆಗೈತಿ. ಹಲ್ಲೆ ಮಾಡೋಕ್ಕೂ ಹೇಸದ ಮಟ್ಟಕ್ಕೆ ಹೋದ ಅಂದ್ರೆ, ನೀನ ಅರ್ಥ ಮಾಡಿಕೋ. ತಂದೆಯಂಥ ತಂದೆಗೂ ಧಮಕಿಲೆ ಮಾತಾಡಾಕ್ ಹತ್ಯಾನ. ಅವನಿಗೆ ಮಾವ ಚೆನ್ನೇಶ ಜೊತೆಯಾಗ್ಯಾನಂತ. ಚೆನ್ನೇಶ ಖತರ್ನಾಕ್ ಆದ್ಮಿ. ಒಂದೆರಡ್ ಕೊಲೆಯಲ್ಲಿ ಶಾಮೀಲ್ ಆಗಿಯೂ ದಕ್ಕಿಸಿಕೊಂಡ ಮನುಷ್ಯ. ರಿಯಲ್ ಎಸ್ಟೇಟ್ ಬಿಸಿನೆಸ್ನಿನಾಗ ಹಣ ಸಂಪಾದಿಸಿದ ಸೊಕ್ಕೈತಿ ಅಂವಗ. ವಿರುಪಾಕ್ಷಿಯ ಈಗಿನ ಅಪಕ್ವ ಮನಸ್ಥಿತಿಗೆ ಇವನು ಜಾತಿ, ಮತ, ಧರ್ಮ, ಅಂತಸ್ತು ಅಂತೆಲ್ಲ ಎಣ್ಣೆ ಸುರಿಯಕತ್ತಾನೆ. ಇಂಥ ಸ್ಫೋಟಕ ಮನಸ್ಥಿತಿಯಲ್ಲಿ ವಿರುಪಾಕ್ಷಿ ಜೊತೆ ಪಂಗಾ ತಗೊಳ್ಳೋದು ಡೇಂಜರೈತಿ. ಮತ್ತ ಅವನ ಮನ ಒಲಿಸುವ ಪ್ರಯತ್ನ ವ್ಯರ್ಥ ಆಕೈತಿ' ಎಂದಿದ್ದಳು.

ಶೈಲತ್ತೆ ಮಾತುಗಳಿಂದ ಅವನ ಮನಸ್ಸು ಬಾಡಿಕೊಂಡಿತ್ತು. ಶೈಲತ್ತೆಯೂ ಅದನ್ನು

